೭೦೭

ಮೈಸೂರ ಗೆಜಿಟ್.

ಸಂ. 42.] ಸರ್ಕಾರದಿಂದ ಪ್ರಾಯುಷ ತಿದ್ದು [ನಂ. 16

ಬೆಂಗಳೂರು, ಗುರುವಾರ, ಏಪ್ರಿಲ್ ತಾ॥ 18, ಸ್ಯ 1907.

III ನೆ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವ್ ಇಲಾಖೆ.

ತಾರೀಖು 20ನೆ ಮಾರ್ಚ್ 1907.

ನಂಬರು. ಜೆ. 2916—ಲೆಜಿಸ್. 47-1906.

ಇಸ್ತಿಹ್ತಾರ್ನಾಮೆ.

ನ್ಯಾಯಗಳನ್ನೂ (ಕಾನೂನು) ಮತ್ತು ರೆಗ್ಯುಲೇಷ್ಗಳನ್ನೂ ಮಾಡುವುದರಲ್ಲಿ ಸಹಾಯವಾಡುವುದಕ್ಕೆ ಕಾರ್ಯತಃ ಅನುಭವದಿಂದಲೂ, ಸ್ಥಳೀಯ ವಿದ್ಯಮಾನಗಳ ಮತ್ತು ಅವಶ್ಯಕತೆಗಳ ಪರಿಚಯದಿಂದಲೂ ಯೋಗ್ಯರಾಗಿರುವ ಸರ್ಕಾರಿ ಉದ್ಯೋಗಸ್ಥರಾದ ಮತ್ತು ಸರ್ಕಾರಿ ಉದ್ಯೋಗಸ್ಥರಲ್ಲದ ಕೆಲವು ದೊಡ್ಡ ಮನುಷ್ಯರನ್ನು ನ್ಯಾಯವಿಧಾಯಕದ ಕೆಲಸದಲ್ಲಿ ತಮ್ಮ ಸರ್ಕಾರದೊಡನೆ ನೇರಿಸುವ ಕಾಲವು ಪ್ರಾಪ್ತವಾಗಿದೆಯೆಂದೂ, ಆಲೋಚಿಸಿರುವ ಉಪಾಯಗಳನ್ನು ಕೆಲವು ಯೋಗ್ಯರಾದ ಮನುಷ್ಯರು ಚರ್ಚಿಸಿ ನಾನಾಮುಖವಾಗಿ ಅವುಗಳನ್ನು ಪರ್ಯಾಲೋಚಿಸುವುದರ ಪ್ರಯೋಜನವು ಅವುಗಳಿಗೆ ಉಂಟಾಗುವಹಾಗೆ ಸರ್ಕಾರಿ ಉದ್ಯೋಗಸ್ಥರೂ ಉದ್ಯೋಗಸ್ಥರಲ್ಲದವರೂ ಸೇರಿರುವ ಒಂದು ನ್ಯಾಯವಿಧಾಯಕ ಸಭೆಯನ್ನು ಏರ್ಪಡಿಸುವುದು ಅವಶ್ಯಕವೆಂದೂ, ಶ್ರೀವರ್ಮ ಮಹಾರಾಜರವರು ಆಲೋಚಿಸುತ್ತಾರೆ. ಇಂಥ ಯಾವುದಾದರೂ ಸಭೆಯು ವಿಚಾರಿಸು ಸಂಸ್ಥಾನದ ಆಡಳಿತಕ್ಕೆ ಸಂಬಂಧಪಟ್ಟ ಇತರ ಎಲ್ಲಾ ವಿಷಯಗಳಲ್ಲಿಯೂ ಇರುವಂತೆ ನ್ಯಾಯವಿಧಾಯಕ ಮಾಡುವುದರಲ್ಲಿ ಕಡೆಗೆ ಶ್ರೀವರ್ಮ ಮಹಾರಾಜರವರಿಗೆ ಮಾತ್ರವೇ ಸೇರಿರುವ ಜವಾಬ್ದಾರಿಯನ್ನು ಯಾವ ರೀತಿಯಿಂದಲೂ ಬಾಧಿಸುವಂತೆ ಅಥವಾ ಕಡವೆ ಮಾಡುವಂತೆ ಉದ್ದೇಶಿಸಿ ಇಲ್ಲವೆಂದು ಹೇಳಬಹುದು. ಆದರೆ ಜನಗಳ ಕೊರತೆಗಳನ್ನೂ ಇಚ್ಛೆಗಳನ್ನೂ ಅನುಭವಗಳನ್ನೂ ಯಥಾರ್ಥವಾಗಿ ತಿಳಿದುಕೊಂಡು ಮೈಸೂರು ಸಂಸ್ಥಾನವನ್ನು ಆಳುವವರಾಗಿ ತಮ್ಮಿಂದ ವಿಧಿಸಲ್ಪಟ್ಟ ನ್ಯಾಯಗಳು (ಕಾನೂನು) ಎಲ್ಲಾ ಪ್ರಕಾರದಲ್ಲೂ ಅವುಗಳ ಉದ್ದೇಶಗಳಿಗೆ ಚೆನ್ನಾಗಿ ತಕ್ಕವಾಗಿರುವಂತೆ ಭದ್ರಪಡಿಸಲು ಶ್ರೀವರ್ಮ ಮಹಾರಾಜರವರಿಗೂ ಅವರ ಸರ್ಕಾರಕ್ಕೂ ಅನುಕೂಲವಾಡಿ ಕೊಡುವುದು ಒಂದೇ ಮೇಲ್ಕಂಡ ಸಭೆಯನ್ನು ಏರ್ಪಡಿಸುವುದರ ಉದ್ದೇಶವಾಗಿದೆ. ಮೇಲ್ಕಂಡ ಸಭೆಯಲ್ಲಿ ಚರ್ಚೆಗಳನ್ನು ಸಾಧಾರಣವಾಗಿ ಬಹಿರಂಗವಾಗಿ ನಡೆಸೋಣವೂ, ಕ್ರಮವಾಗಿ ಏರ್ಪಡಿಸಿದ ನ್ಯಾಯವಿಧಾಯಕ ಸಭೆಗೆ ಮುಖ್ಯವಾದ ಲಕ್ಷಣಗಳಲ್ಲಿ ಒಂದಾಗಿರುವ ಸೆಲೆಕ್ಟ್ ಕಮಿಟಿ ಅಥವಾ ನಿಯುಕ್ತ ಸಮಾಜದಲ್ಲಿ ಪ್ರತಿ ಉಪಾಯವನ್ನೂ ತಪಶೀಲುವಾರಾಗಿ ಆಲೋಚಿಸುವುದಕ್ಕೆ ಉಂಟಾಗುವ ಅನುಕೂಲವೂ, ಮೇಲ್ಕಂಡ ಸಭೆಯಿಂದ ಕಾರ್ಯತಃ ಬಹಳ ಬಳ್ಳಿಯದು ಆಗಬಹುದೆಂದು ನಿರೀಕ್ಷಿಸುವುದಕ್ಕೆ ಹೆಚ್ಚು ಕಾರಣಗಳುಂಟಿವೆ.

ಈ ಕಾರಣಗಳಿಂದ ಮೈಸೂರಿನಲ್ಲಿ ನ್ಯಾಯಗಳನ್ನೂ (ಕಾನೂನು) ರೆಗ್ಯುಲೇಷ್ಗಳನ್ನೂ ಏರ್ಪಡಿಸುವುದಕ್ಕಾಗಿ ಒಂದು ಸಭೆಯನ್ನು ಸ್ಥಾಪಿಸುವುದಕ್ಕೋಸ್ಕರ ಇದಕ್ಕೆ ಲಗತ್ತುವಾಡಿರುವ ರೆಗ್ಯುಲೇಷನನ್ನು ವಿಧಿಸಲು ಶ್ರೀವರ್ಮ ಮಹಾರಾಜರವರು ಅಪ್ಪಣೆ ದಯಪಾಲಿಸಿರುತ್ತಾರೆ.

2. ಮೊದಲು ಸಲ ಪ್ರಕಟನೆಯಾದ ತಾರೀಖಿನಿಂದ ಮೂರು ತಿಂಗಳುಗಳು ತೀರಿದ ಮೇಲೆ ಜಾರಿಗೆ ಬರುವ ಈ ರೆಗ್ಯುಲೇಷನ್ ಪ್ರಕಾರ ನ್ಯಾಯವಿಧಾಯಕ ಸಭೆಯಲ್ಲಿ ದೀವಾನರು ಸಭಾಧ್ಯಕ್ಷರಾಗಿಯೂ ಇಬ್ಬರು ಕೌನ್ಸಿಲರುಗಳೂ ಉದ್ಯೋಗಪ್ರಯುಕ್ತವಾದ ಸಭಿಕರಾಗಿಯೂ ಸರ್ಕಾರದಿಂದ ನೇಮಿಸಲ್ಪಟ್ಟು, ಒಂದು ಸಲಕ್ಕೆ ಎರಡು ವರ್ಷಗಳ ಕಾಲಪರ್ಯಂತ ಉದ್ಯೋಗದಲ್ಲಿರುವ ಹತ್ತಕ್ಕೆ ಕಡಮೆಯಿಲ್ಲದ ಅಥವಾ ಹದಿನೈದಕ್ಕೆ ಮಿಾರದ ಹೆಚ್ಚು ಸಭಿಕರೂ ಸೇರಿರುವರು. ಅಂಥಾ ಹೆಚ್ಚು ಸಭಿಕರಲ್ಲಿ ಐದರಲ್ಲಿ ಎರಡುಭಾಗಕ್ಕೆ ಕಡಮೆಯಿಲ್ಲದಷ್ಟುಮಂದಿ ಉದ್ಯೋಗಸ್ಥರಲ್ಲದವರಾಗಿರಬೇಕು ಮತ್ತು ಸರ್ಕಾರದಿಂದ ನೇಮಕವಾಗುವುದಕ್ಕೆ ಮುಂಚೆ ಉದ್ಯೋಗಸ್ಥರಲ್ಲದ ಸಭಿಕರ ಪೈಕಿ ಎಲ್ಲರನ್ನೂ ಅಥವಾ ಅವರಲ್ಲಿ ಯಾರನ್ನಾದರೂ ಆರಿಸುವುದಕ್ಕೆ ಷರತ್ತುಗಳನ್ನು ಗೊತ್ತುಮಾಡಲು ನಿಯಮಮಾಡಿದೆ. ಪ್ರಕೃತದಲ್ಲಿ ಹೆಚ್ಚು ಸಭಿಕರ ಸಂಖ್ಯೆಯನ್ನು ಹತ್ತಕ್ಕೆ ಗೊತ್ತುಮಾಡಿ ನೇಮಕಗಳನ್ನೆಲ್ಲಾ ಸರ್ಕಾರದವರ ಕೈಯಲ್ಲಿ ಇಟ್ಟುಕೊಳ್ಳಲಾಗುವುದು. ಸ್ಥಳೀಯ ಸಂಸ್ಥೆಗಳಿಗೆ ಪ್ರತಿನಿಧಿಗಳನ್ನು ಕಳುಹಿಸುವ ಸ್ವಾತಂತ್ರ್ಯವನ್ನು ಕೊಡುವ ವಿಷಯವನ್ನು ಮುಂದೆ ಸಾಕಾದಷ್ಟು ಅನುಭವವುಂಟಾದಮೇಲೆ ಪರ್ಯಾಲೋಚಿಸಲಾಗುವುದು. ನೇಮಕಮಾಡಲ್ಪಟ್ಟ ಹೆಚ್ಚು ಸಭಿಕರ ಹೆಸರುಗಳನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುವುದು.

3. ನ್ಯಾಯವಿಧಾಯಕ ಸಭೆಯಲ್ಲಿ ಕೆಲಸ ನಡೆಯೋಣವನ್ನು ಕ್ರಮಪಡಿಸುವುದಕ್ಕೆ ಆಗಾಗ್ಗೆ ಅವಶ್ಯವಾಗಬಹುದಾದ ನಿಬಂಧನೆಗಳನ್ನು ಮಾಡುವುದು ಸದರಿ ಸಭೆಯ ಕೆಲಸವಾಗಿದ್ದರೂ ಅಂಥಾ ನಿಬಂಧನೆಗಳಲ್ಲಿ 'ಯಾವುದಕ್ಕೊಸ್ಕರ ನಿಯಮ ಮಾಡಬೇಕೆಂದು ಉದ್ದೇಶಿಸಿದೆಯೋ ಅದಕ್ಕೆ ಉದಾಹರಣೆಯಾಗಿಯೂ, ಅಂಥಾ ನಿಬಂಧನೆಗಳನ್ನು ಹೆಚ್ಚಿಸುವುದಕ್ಕೆ ಅಥವಾ ಬದಲಾಯಿಸುವುದಕ್ಕೆ ಅವಶ್ಯಕತೆ ತೋರುವವರೆಗೆ ಮೇಲ್ಕಂಡ ಹೊಸ ಸಭೆಯು ಬಾಲ್ಯದಲ್ಲಿ ಎಲ್ಲಾ ಉದ್ದೇಶಗಳಿಗೂ ಕಾರ್ಯಕಾರಿಸಾಕಾಗಿರಬಹುದಾದವುಗಳಾಗಿಯೂ, ಮೇಲ್ಕಂಡ ರೆಗ್ಯುಲೇಷನಿನ ಕೊನೆಯಲ್ಲಿರುವ ಪಟ್ಟಿಯಲ್ಲಿ ಮೇಲ್ಕಂಡ ವಿಷಯವನ್ನು ಕುರಿತು ಕೆಲವು ನಿಬಂಧನೆಗಳನ್ನು ಕೊಡುವುದು ಅನುಕೂಲವಾಗಿರುವುದೆಂದು ಯೋಚಿಸಿ ಇದೆ. ಸಭೆಯಿಂದ ಮಾಡಲ್ಪಟ್ಟ ಎಲ್ಲಾ ನಿಬಂಧನೆಗಳನ್ನೂ ಅಥವಾ ಅವುಗಳಲ್ಲಿ ಯಾವುದನ್ನಾದರೂ ಒಪ್ಪದಿರುವ ಹಕ್ಕನ್ನು ಸರ್ಕಾರಕ್ಕೆ ಉಳಿಸಿಕೊಂಡಿದ್ದರೂ, ಅದನ್ನು ಸಹಜವಾಗಿ ಸಭೆಯಿಂದ ಮಾಡಲ್ಪಟ್ಟ ಬಂದು ನಿಬಂಧನೆಯು ಸಭೆಯ ಕೆಲಸವು ಕಾರ್ಯಸಾಧಕವಾಗಿ ಹೊಂದಿಕೆಯಾಗಿ ಅಥವಾ ತ್ವರೆಯಾಗಿ ನಡೆಯುವುದಕ್ಕೆ ಅವನುಕೂಲಕಾಗಿರಬಹುವಾದ ಅಪರೂಪವಾದ ಸಂದರ್ಭಗಳಲ್ಲಿ ಮಾತ್ರ ನಡೆಸಲಾಗುವುದು.

4. ಸಭೆಯ ಕೂಟಗಳಲ್ಲಿ ನಡೆಸಬೇಕಾಗಿರುವ ಕೆಲಸವನ್ನೂ ಅಲ್ಲಿ ಪ್ರಸ್ತಾಪಿಸಲ್ಪಟ್ಟ ಉಪಾಯಗಳನ್ನೂ "ಆಲೋಚಿಸಿ ನಿರ್ಣಯಿಸುವುದಕ್ಕೆ" ಮಾತ್ರ ನಿಬಂಧಿಸಲ್ಪಡುವುದು. ಪ್ರತಿ ಉಪಾಯದ ವಿಧಿಯನ್ನೂ ವಿಧಿಸೋಣವು ಶ್ರೀವರ್ಮ ಮಹಾರಾಜರವರಿಗೆ ಸೇರಿರುತ್ತದೆ ಮತ್ತು ಅಂಥಾ ಉಪಾಯಕ್ಕೆ ಅಪರ ಅನುಜ್ಞೆಯನ್ನು ಕೊಡೋಣದರಿಂದ ಅದು ನ್ಯಾಯವಿಧಿಯಾಗಿ ಆಗುತ್ತದೆ. 12ನೆ ಪ್ರಕರಣಕ್ಕೆ ಲಗತ್ತು ಮಾಡಿರುವ ನಿಯಮವು, ಈ ರಾಜ್ಯಕ್ಕೂ ಬ್ರಿಟಿಷ್ ಸಾಮ್ರಾಜ್ಯಕ್ಕೂ ಇರುವ ಸಂಬಂಧಗಳಿಗೆ ಸೇರಿರುವ ಎಲ್ಲಾ ವಿಷಯಗಳನ್ನೂ ಹಾಗೆಯೇ ಸರ್ಕಾರದ ಪರ್ಯಾಲೋಚನೆಗಾಗಿ ಶ್ರೀವರ್ಮ ಮಹಾರಾಜರವರಿಂದ ವಿಶೇಷವಾಗಿ ಉಳಿಸಿ ಇಡಲ್ಪಡಬಹುದಾದ ಯಾವುದಾದರೂ ಇತರ ವಿಷಯಗಳನ್ನೂ ಸಭೆಯ ಆಲೋಚನೆಗಳಿಂದ ಪ್ರತಿಷೇಧಿಸುತ್ತದೆ. ಅಂಥಾ ಎಲ್ಲಾ ಸಂದರ್ಭಗಳಲ್ಲಿಯೂ 14ನೆ ಪ್ರಕರಣದಿಂದ ಉಳಿಸಿಡಲ್ಪಟ್ಟಿರುವ ಅಧಿಕಾರದ ಮೂಲಕ ಅವಶ್ಯವಾದ ರೆಗ್ಯುಲೇಷ್ಯಗಳನ್ನು ಏರ್ಪಡಿಸಿ ಅವನ್ನು ಶ್ರೀವರ್ಮ ಮಹಾರಾಜರವರ ಅನುಜ್ಞೆಗೆ ಕಳುಹಿಸುವುದು ಸರ್ಕಾರಕ್ಕೆ ಯೋಗ್ಯವಾಗಿರುವುದು.

5. ಯಾವುವು ನ್ಯಾಯವಿಧಾಯಕ ಸಭೆಯ ಅಧಿಕಾರಕ್ಕೆ ಹೊರಗಾಗಿಲ್ಲದೆ ಇದ್ದರೂ ಅತ್ಯವಶ್ಯವಾಗಿ ಬೇಕಾಗಿದ್ದು ಅವುಗಳನ್ನು ಕ್ರಮವಾಗಿ ಸಭೆಯಲ್ಲಿ ಪ್ರಸ್ತಾಪಿಸಿ ಆಲೋಚಿಸಿ ನಿರ್ಣಯಿಸುವುದಕ್ಕೆ ಬಹಳ ಕಾಲ ವಿಳಂಬವಾಗಬಹುದೋ ಅಥವಾ ಹಾಗೆ ಮಾಡುವುದು ಅನ್ಯಥಾ ಅಯುಕ್ತವಾಗಿರಬಹುದೋ ಅಂಥಾ ಉಪಾಯಗಳನ್ನು ನಿರ್ಣಯಿಸುವುದಕ್ಕೆ 15ನೆ ಪ್ರಕರಣದಲ್ಲಿ ವಿಶೇಷ ನಿಯಮ ಮಾಡಿದೆ. ಅದಕ್ಕೂ ಅಂಥಾ ರೆಗ್ಯುಲೇಷ್ಯಗಳು ಆರು ತಿಂಗಳಿಗಿಂತ ಹೆಚ್ಚಾಗಿ ಉಪಯೋಗದಲ್ಲಿರುವಂತೆ ಉದ್ದೇಶಿಸಲ್ಪಟ್ಟಿಲ್ಲ; ಆ ಕಾಲಕ್ಕೆ ಮಿಾರಿ ಅವುಗಳನ್ನು ಉಪಯೋಗದಲ್ಲಿ ಇಡಬೇಕಾದರೆ ಎಲ್ಲಾ ಉಪಾಯಗಳನ್ನೂ ಪದ್ಧತಿವೀರ ಆಲೋಚನೆಬಗ್ಗೆ ಸಭೆಯ ಮುಂದೆ ಕ್ರಮವಾಗಿ ಇಡುವಹಾಗೆ ಆ ವಿಷಯವನ್ನೂ ಇಡಲಾಗುವುದು.

ಆಜ್ಞೆಯ ಮೇರೆಗೆ,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟರಿ.